ಸಿವಿಲ್ ಜಡ್ಜ (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ.

<u>ಸಿ. ಸಿ. ನಂ. 542ಃ2018.</u>

ಫಿರ್ಯಾದಿ ಃ ಕರ್ನಾಟಕ ಸರ್ಕಾರ, (ಕಲಘಟಗಿ ಪಿ. ಎಸ್.)

ವಿರುದ್ಧ

ಆರೋಪಿತ ಶ್ರೀನಿವಾಸ ತಂದೆ ಮಾದೇವಪ್ಪ ಬಜಂತ್ರಿ

<u>ಆಪಾದನೆ</u>

ಕಲಘಟಗಿ ಪೊಲೀಸ್ ಠಾಣಾ ಹದ್ದಿ ಪೈಕಿ ಹುಬ್ಬಳ್ಳಿ-ಕಾರವಾರ ರಸ್ತೆ ಕಲಘಟಗಿ ತಾಲೂಕಿನ ಸಾತೋಶಹೀದ್ ಕ್ರಾಸ್ ಸಮೀಪ ರಸ್ತೆ ಮೇಲೆ ದಿಃ 22.03.2018 ರಂದು 4 ಗಂಟೆ ಸುಮಾರಿಗೆ ಆರೋಪಿಯೊದ ನೀವು ನಡೆಸುತ್ತಿದ್ದ ಗೂಡ್ಸ್ ಟ್ರಕ್ ನಂ ಕೆಎ 24/8461 ನೇದ್ದನ್ನು ಕಲಘಟಗಿ ಕಡೆಯಿಂದ ಕಾರವಾರ ಕಡೆಗೆ ಅತಿಜೋರು ಮತ್ತು ಅಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ನಡೆಸಿಕೊಂಡು ಬಂದಿರುತ್ತೀರಿ. ಆ ಮೂಲಕ ಭಾರತ ದಂಡ ಸಂಹಿತೆ ಕಲಂ 279 ರಿತ್ಯಾ ದಂಡನೀಯವಾದ ಅಪರಾಧವನ್ನು ಈ ನ್ಯಾಯೊಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯೊದ ನೀವು ಮುಂದುವರೆದು ಕಲಘಟಗಿ ಸಾತೋಶಹೀನ ದರ್ಗಾ ಕಡೆಗೆ ಹೊರಟ ಪಿರ್ಯಾದಿದಾರನ ತಮ್ಮ ಶೌಕತ್ ಇಂಗಳಹಳ್ಳಿ ಈತನ ಮೋಟಾರ್ ಸೈಕಲ್ ನಂ ಕೆಎ25/ಇವಾಯ 3549 ನೇದ್ದಕ್ಕೆ ಹಿಂದಿನಿಂದ ಡಿಕ್ಕಿ ಮಾಡಿ ಅಪಘಾತಪಡಿಸಿ ಬಲವಾದ ಗಾಯಪಡಿಸಿ ಉಪಚಾರಕ್ಕೆ ಸಾಗಿಸುವಾಗ ಮಾರ್ಗ ಮಧ್ಯದಲ್ಲಿ ಮರಣ ಹೊಂದುವಂತೆ ಮಾಡಿರುತ್ತೀರಿ. ಆ ಮೂಲಕ ಭಾರತ ದಂಡ ಸಂಹಿತೆ ಕಲಂ 304(ಎ) ರಿತ್ಯಾ ದಂಡನೀಯವಾದ ಅಪರಾಧವನ್ನು ಈ ನ್ಯಾಯೊಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯೊದ ನೀವು ಮುಂದುವರೆದು ಅಪಘಾತ ಮಾಡಿದ ನಂತರ ಸದರಿ ಘಟನೆಯ ಸಂಗತಿಯನ್ನು ಪೋಲೀಸರಿಗೆ ತಿಳಿಸದೇ, ಗಾಯೊಳುಗಳ ಉಪಚಾರಕ್ಕೆ ಸಹಕರಿಸದೇ ವಾಹನ ಬಿಟ್ಟು ಸ್ಥಳದಿಂದ ಹೋಗಿರುತ್ತೀರಿ. ಆ ಮೂಲಕ ಭಾರತೀಯ ಮೋಟಾರ್ ಕಾಯ್ದೆ ಕಲಂ 134 ಸಹ ಕಲಂ 187 ರ ರೀತ್ಯಾ ದಂಡನೀಯವಾದ ಅಪರಾಧವನ್ನು ಈ ನ್ಯಾಯೊಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ-1) ಈಗ ಓದಿ ಹೇಳಿದ ಆಪಾದನೆ ನಿನಗೆ ತಿಳಿಯಿತೇ ?

ಉತ್ತರಃ- ಆರೋಪಿ ಃ

ಪ್ರಶ್ನೆ-2) ಈ ಆಪಾದನೆಯನ್ನು ಒಪ್ಪಿಕೊಳ್ಳುವೆಯಾ ಅಥವಾ ನಿನ್ನ ವಿಚಾರಣೆಯಾಗಬೇಕೋ ?

ಉತ್ತರಃ- ಆರೋಪಿ ಃ

(ಆರೋಪಿಗೆ ತಿಳಿಯುವಂತೆ ಕನ್ನಡ ಭಾಷೆಯಲ್ಲಿ ಈ ಪ್ರತಿಪಾದನೆಯನ್ನು ಓದಿ ತಿಳಿಸಿ ಹೇಳಿ ಸದರೀ ಆರೋಪಿ ಹೇಳಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು

ಕಲಘಟಗಿ, ಸಹಿ/-
ದಿಃ 11.02.2019 ಸಿವಿಲ್ ಜಡ್ಜ (ಕಿ.ವಿ.) ವ ಜೆಎಂಎಫ್‌ಸಿ,ಕಲಘಟಗಿ